# ಸದ್ಯವನ್ನು ಕುರಿತು

ಸದ್ಯದ ಬಗ್ಗೆ ಆಲೋಚಿಸೋಣ. ಕಾಲದ ಚಕ್ರ ಉರುಳುತ್ತದೆ. ದಿನ, ವಾರ, ತಿಂಗಳು, ವರ್ಷಗಳು ಮರಳುತ್ತವೆ. ವೈಯಕ್ತಿಕ– ಸಾಮಾಜಿಕವೂ, ನಿರೀಕ್ಷಿತ– ಅನಿರೀಕ್ಷಿತವೂ ಆದ ಘಟನೆಗಳು ಘಟಿಸುತ್ತವೆ. ಹಲವು ಏರು ಪೇರು ಸಾಮಾನ್ಯವೆ. 2012 ರಲ್ಲಿ ನಿರ್ಭಯಳ ಅತ್ಯಾಚಾರ– ಅರೆಶಿಕ್ಷಿತ, ಬೀದಿಹೋಕ, ಅತೃಪ್ತ ಕಾಮಿಗಳ ಕ್ರೌರ್ಯದ ಪ್ರದರ್ಶನವಾದರೆ; ನಂತರ 2013ರ ಉದ್ದಕ್ಕೂ ನಡೆದ ಸರಣಿ ಘಟನೆಗಳು ಈ ಸನಾತನ ದೇಶದ ಸಂಭಾವಿತರ ಒಳಮನಸ್ಸಿನ ಹಲವು ಪದರಗಳನ್ನು ಬಿಚ್ಚಿಟ್ಟಿತು. ನಿರ್ಭಯಳ ಪರ ದೇಶದ ಉದ್ದಗಲಕ್ಕೂ ನಡೆದ ಪ್ರತಿರೋಧಗಳು ನೈತಿಕ ಸ್ಥೈರ್ಯವನ್ನು ಹೆಚ್ಚಿಸುವಂಥದ್ದೇ ಆದರೂ 2013ರ ಸರಣಿ ಘಟನೆಗಳನ್ನು ನೋಡಿದ ಜನ ಜಿಗುಪ್ಸೆಗೊಂಡರು, ಮೂಕಸಾಕ್ಷಿಯಾದರು. ಯಾಕೆಂದರೆ ಹೆಣ್ಣಿನ ವಿರುದ್ಧ ದೌರ್ಜನ್ಯ, ಅತ್ಯಾಚಾರಗಳಲ್ಲಿ ಭಾಗಿಯಾದವರು ಕೇವಲ ಸಾಮಾನ್ಯರಾಗಿರಲಿಲ್ಲ. ಅಲ್ಲಿ ಪ್ರತಿಷ್ಠಿತರಿದ್ದರು. ರಾಜಕಾರಣಿಗಳು, ಅಧಿಕಾರಿಗಳು ಅಷ್ಟೆ ಅಲ್ಲ; ಪತ್ರಕರ್ತರು, ನ್ಯಾಯಾದೀಶರು, ವೃದ್ಧ ಸನ್ಯಾಸಿಗಳು ಇವರೆಲ್ಲರೂ ಪಾತ್ರಧಾರಿಗಳಾಗಿ ಕುಖ್ಯಾತರಾದರು. ಕೀಚಕರ ರೌದ್ರ ನರ್ತನದಿಂದ ಅಸಹಾಯಕ ಹೆಣ್ಣು ಮನಸ್ಸು ಕುಸಿದುಹೋಯಿತು.

ಅತ್ಯಾಚಾರ ಎನ್ನುವ ಶಬ್ದವೀಗ ಅದರ ಅರ್ಥ, ವ್ಯಾಪ್ತಿಗಳನ್ನು ಮೀರಿ ಬರ್ಬರವಾಗುತ್ತಿದೆ. 3–4 ವರ್ಷದ ಮಗುವಿನ ಮೇಲೆ ನಡೆಯುವ ಹೀನಕೃತ್ಯವನ್ನು ಏನನ್ನುವುದು? ತಂದೆಯಾದವನೆ ಮಗಳ ಮೇಲೆ ಕಾಮದೃಷ್ಟಿಯನ್ನು ನೆಡುವ ವೈಪರೀತ್ಯಕ್ಕೆ ಕಾರಣವೇನು? ಮೊನ್ನೆತಾನೆ ಮಲಮಗಳೆನಿಸಿಕೊಂಡ ಎಳೆಬಾಲೆಗೆ ಎಣ್ಣೆ ಬಟ್ಟಲು ಚೆಲ್ಲಿದಳೆಂಬ ಕ್ಷುಲ್ಲಕ ಕಾರಣಕ್ಕೆ ಸಾಯುವ ಹಾಗೆ ಹೊಟ್ಟೆಗೆ ಗುದ್ದಿದ್ದಾನೆ ತಂದೆಯ ಸ್ಥಾನದಲ್ಲಿರಬೇಕಾದ ಭೂಪನೊಬ್ಬ! ಇವೆಲ್ಲವೂ ವಿಕೃತಿಯ ಅಸಹ್ಯ ಮುಖಗಳು.

ಯಾಕೆ ಹೀಗೆ? ನಮ್ಮ ಸಮಾಜದಲ್ಲಿ ವಿಕೃತತೆ ತಾಂಡವವಾಡುತ್ತಿದೆಯೆ? ನಾವಿನ್ನೂ ಅನಾಗರಿಕ ಯುಗದಲ್ಲಿ ಇದ್ದೇವೆಯೆ ಎಂದು ಒಮ್ಮೊಮ್ಮೆ ಅನಿಸುತ್ತದೆ. ಇವೆಲ್ಲಕ್ಕೂ ಕಾರಣ ಅವಿದ್ಯೆ. ಅಂದರೆ ಓದು ಬರಹ ಇಲ್ಲವೆಂತಲ್ಲ, **ignorance** ಅಂತಲೂ ಅಲ್ಲ. ಬೌದ್ಧ ವಾಙ್ಮಯದಲ್ಲಿ ಇದಕ್ಕೆ ವಿಶಾಲ ಅರ್ಥವಿದೆ. ನಮ್ಮ ಮಕ್ಕಳು ಅರಳುವ ಸಮಯದಲ್ಲಿ ಅವರಿಗೆ ತಿಳಿವಳಿಕೆ ನೀಡುವುದನ್ನು ಬಿಟ್ಟು ನಾವು ಅವರ ಕುತೂಹಲವನ್ನು ಹತ್ತಿಕ್ಕುವುದೇ ಹೆಚ್ಚು. ಆ ರಚನಾತ್ಮಕ ವಯೋಮಾನದಲ್ಲಿ ಅದುಮಿಟ್ಟ ಮನಸ್ಸಿಗೆ ಮಿಥ್ಯೆಯೇ ಆಹಾರವಾಗುತ್ತದೆ. ನಮ್ಮ ಅರಿವಿಗೆ ಬಾರದಂತೆಯೆ ನೇತ್ಯಾತ್ಮಕ ನೈತಿಕತೆ **(negative morality)** ಯೊಂದಿಗೆ ಹದಿಹರೆಯದ ಮಕ್ಕಳು ಬಳಲುತ್ತಾ ಬೆಳೆಯುತ್ತವೆ.

ಒಮ್ಮೆ ನಾನು ಅಮೆರಿಕಾದ ಡಲ್ಲಾಸ್ ನಗರದಲ್ಲಿ ಸ್ನೇಹಿತರೊಬ್ಬರ ಮನೆಯಲ್ಲಿದ್ದೆ. ಆತ ತಮ್ಮ ಮಗನಿಗೆ ಸ್ನಾನ ಮಾಡಿಸುವಾಗ ತಾವು ನಗ್ನರಾಗಿರುತ್ತಿದ್ದರಂತೆ. ಹಾಗೆಯೆ ತಮ್ಮ ಸ್ನಾನವನ್ನೂ ಮುಗಿಸಿ ಬರುತ್ತಿದ್ದರಂತೆ. ಆಗ ಅವರು ಮಗನಿಗೆ ದೇಹದ ಅಂಗಾಂಗಗಳ ಬಗ್ಗೆ ಪರಿಚಯಿಸುತ್ತಿದ್ದರು. ಲೈಂಗಿಕತೆಯನ್ನು ಕುರಿತ ವಿಷಯಗಳನ್ನು ಹೇಳುತ್ತಿದ್ದರು. ಹಾಗೆಯೇ ತಾಯಿ ತನ್ನ ಮಗಳಿಗೆ ಸ್ನಾನ ಮಾಡಿಸುತ್ತಾಳೆ. ಹರೆಯಕ್ಕೆ ಜಿಗಿಯುವ ಮುನ್ನ ಇರಬೇಕಾದ ಜವಾಬ್ದಾರಿಗಳ ಬಗ್ಗೆ ಮಾಹಿತಿ ನೀಡುತ್ತಾಳೆ (ಅಲ್ಲಿ ಲೈಂಗಿಕತೆಯನ್ನು ತರಗತಿಯಲ್ಲಿಯೂ ಕಲಿಸುತ್ತಾರೆ). ಪಾಶ್ಚಾತ್ಯ ದೇಶಗಳಲ್ಲಿ ಈ ಪರಿಪಾಠವಿದೆ ಎಂದು ತಿಳಿದು ನನಗೆ ಆಶ್ಚರ್ಯವಾಯಿತು. ಅಲ್ಲಿನ ಶಾಲೆಗಳಲ್ಲಿ ಲಿಂಗಭೇದವಿಲ್ಲದೆ ಒಟ್ಟಿಗೆ ಆಟವಾಡುತ್ತಾರೆ. ಹೆಣ್ಣುಮಕ್ಕಳಿಗೆಂದು ಬೇರೆಯಾದ ಈಜುಕೊಳಗಳಿಲ್ಲ, ಜಿಮ್ಮುಗಳಿಲ್ಲ. ಸಮುದ್ರ ಸ್ನಾನದಲ್ಲಿ ಇನ್ನೊಬ್ಬರನ್ನು ಇಣುಕುವುದಿಲ್ಲ. ಇದಕ್ಕೆ ವಿರುದ್ಧವಾಗಿ ಸೌದಿ ಅರೇಬಿಯಾದಲ್ಲಿ ಹೆಣ್ಣಿನ ಧ್ವನಿ ಅಪರಿಚಿತ ಗಂಡಿನ ಕಿವಿಗೆ ಬೀಳಬಾರದೆಂಬ ಕಟ್ಟಳೆಯಿದೆಯಂತೆ. ಬಿದ್ದರೆ ಆ ಹೆಣ್ಣು ಅವನ ಮುಂದೆ ಬೆತ್ತಲಾದಂತೆಯೆ ಸರಿ (ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವದಲ್ಲಿ ನೋಡಿದ ವಾಜ್ದಾ ಚಿತ್ರದ ಸಂಭಾಷಣೆ). ಒಂದು ಸಮಾಜ ಹೆಣ್ಣಿಗೆ ಸೃಷ್ಟಿ ಸಹಜ ಬೆಳಕನ್ನೆ ನಿರಾಕರಿಸಿದರೆ, ಇನ್ನೊಂದು ಸ್ವಾತಂತ್ರ್ಯ, ಮುಕ್ತತೆಯ ಸೋಗಿನಲ್ಲಿ ಸ್ವಚ್ಛಂದಕ್ಕೂ ದಾರಿ ತೋರುತ್ತದೆ. ಇರಲಿ, ನಗ್ನತೆಯ ಬಗ್ಗೆ ಕುತೂಹಲವನ್ನು ಬಾಲ್ಯದಲ್ಲಿಯೆ ಕಳೆದುಕೊಂಡರೆ ವಯಸ್ಕರಾದಾಗ ಆರೋಗ್ಯವಂತ ಮನಸ್ಕರಾಗಬಹುದೇನೊ. ಮುಚ್ಚಿದ ಸಮಾಜಗಳಲ್ಲಿ ಮುದುಕರಾದರೂ ಕುತೂಹಲ ತಣಿದಿರುವುದಿಲ್ಲ, ಅಷ್ಟೆ ಅಲ್ಲ; ಯಾವಾಗ ದುಶ್ಯಾಸನ ಸಾಹಸಕ್ಕಿಳಿಯುತ್ತಾರೋ ಹೇಳಲು ಬರುವುದಿಲ್ಲ.

ಪ್ರಕೃತಿ ಎರಡು ವಿರುದ್ಧ ತತ್ವಗಳನ್ನು ಒಳಗೊಂಡಿದೆ. ಅವು ಗಂಡು ಮತ್ತು ಹೆಣ್ಣು **(male and female)**. ಒಂದು ಬೆಂಕಿ ಅಥವಾ ಶಾಖವನ್ನು ಪ್ರತಿನಿಧಿಸಿದರೆ ಇನ್ನೊಂದು ನೀರು ಅಥವಾ ಶೀತವನ್ನು ಪ್ರತಿನಿಧಿಸುತ್ತದೆ. ವಾಸ್ತವವಾಗಿ ನೀರಿಗೆ ಬೆಂಕಿಯನ್ನು ನಂದಿಸುವ ಶಕ್ತಿಯಿದೆ. ಶೀತಕ್ಕೆ ಶಾಖವನ್ನು ತಗ್ಗಿಸುವ ಶಕ್ತಿಯಿದೆ. ಗಂಡು ಆಕ್ರಮಣಕಾರಿಯಾದರೆ, ಹೆಣ್ಣು ತಾಟಸ್ಥ್ಯವನ್ನು ಪ್ರದರ್ಶಿಸುತ್ತಾಳೆ. ಗಂಡನ್ನು ತಾಯಿಯೇ ಹೆರುವುದರಿಂದ ಸೃಷ್ಟಿಕ್ರಿಯೆಯಲ್ಲಿ ಹೆಣ್ಣು ಮೇಲುಗೈ ಪಡೆಯುತ್ತಾಳೆ. ನಮ್ಮ ಆರಾಧನೆಯಲ್ಲಿ ಶಿವನಿಗಿಂತಲೂ ಶಕ್ತಿಗೆ ಹೆಚ್ಚು ಪ್ರಾಶಸ್ತ್ಯ. ಆದರೂ ಇತರ ಪ್ರಾಣಿವರ್ಗಗಳಿಗಿಂತ ಬುದ್ಧಿಮತ್ತೆ ಮನುಷ್ಯ ವರ್ಗದಲ್ಲಿ ಹೆಣ್ಣು ಅಬಲೆಯಾಗಿಯೆ ಉಳಿದಿರುವುದು ವಿಪರ್ಯಾಸ. ಜನಸಂಖ್ಯೆಯ ಅರ್ಧದಷ್ಟಿರುವ ಹೆಣ್ಣುಕುಲಕ್ಕೆ ಭಾರತದೊಳಗಡೆ ಮನೆಯ ಒಳಗೂ, ಹೊರಗೂ ಶೀತಲಯುದ್ಧದ ಭಯ! ಇದಕ್ಕೆ ಮುಕ್ತಿ ಎಂದು?

■ ಮೂಚಿ

## ಮಾತೇ ಮುತ್ತು

★ ಮಂಜಿನಂತೆ ಬೆಳ್ಳಗಿದ್ದರೂ, ಮಂಜುಗಡ್ಡೆಯಂತೆ ತಣ್ಣಗಿದ್ದರೂ ನೀನು ಅಪವಾದಗಳಿಂದ ತಪ್ಪಿಸಿಕೊಳ್ಳಲಾರೆ!

–ಹ್ಯಾಮ್ಲೆಟ್

★ ಸದ್ಗುಣಶೀಲಳಾದ ಸ್ತ್ರೀಯಿಂದ ಮನೆಯ ಗೌರವದ ರಕ್ಷಣೆಯಾಗುತ್ತದೆ.

–ಕೊಡಗಿನ ಗೌರಮ್ಮ

★ ಇಚ್ಛೆಯಿಂದ ದುಃಖ, ಇಚ್ಛೆಯಿಂದ ಭಯ. ಯಾರು ಇಚ್ಛೆ ಅಥವಾ ಆಸೆಗಳಿಂದ ಮುಕ್ತನಾಗುತ್ತಾನೆಯೋ ಅವನನ್ನು ದುಃಖ, ಭಯ ಬಾಧಿಸುವುದಿಲ್ಲ.

–ಭಗವಾನ್ ಬುದ್ಧ

★ ಜೀವನ ಹೂವಿನ ಹಾಸಿಗೆಯಲ್ಲ. ಕಲ್ಲುಮುಳ್ಳುಗಳಿಂದ ತುಂಬಿದೆ, ಎಚ್ಚರಿಕೆಯಿಂದ ನಡೆಯುವುದು ಅವಶ್ಯ.

–ಮಹಾತ್ಮ ಗಾಂಧೀಜಿ

★ ಹೆಜ್ಜೆ ಹೆಜ್ಜೆಗೂ ಸಂಶಯಪಡುವ ಸ್ವಭಾವವುಳ್ಳವರು ವಂಚನೆಗೆ ಗುರಿಯಾಗುವುದು ಅಪರೂಪ.

–ಚರ್ಚಿಲ್

★ ಸಹೃದಯವಂತರು ಹೆಚ್ಚು ಸಂಖ್ಯೆಯ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ.

–ಕಣ್ಣದಾಸನ್

★ ಒಂದು ಬಾಣವನ್ನು ಬಿಟ್ಟು ಎರಡನ್ನು ಒಂದು ಮಾಡುವ ಬಿಲ್ಲಾಳು ಎಂದರೆ ಮನ್ಮಥ ಒಬ್ಬನೇ.

–ಅರ್ಥಶಾಸ್ತ್ರ

★ ಯಾರು ಪದವಿಗಾಗಿ ಸ್ವಾರ್ಥವನ್ನು ತ್ಯಜಿಸುವರೋ ಅವರೇ ಸಜ್ಜನರು.

–ಭರ್ತೃಹರಿ

★ ಯಾವುದನ್ನು ನಾವು ಗೌರವಿಸುವುದಿಲ್ಲವೋ, ಅದನ್ನು ಮಾಡಹೊರಟರೆ ಸಂತೋಷ ನಮ್ಮ ಪಾಲಿಗಿರುವುದಿಲ್ಲ.

–ಫ್ರೆಯಾ ಸ್ಟಾರ್ಕ್

★ ಕೀರ್ತಿಯು ತಂತಾನೇ ಬರುವುದಿಲ್ಲ. ಅದು ವ್ಯಕ್ತಿಯ ದೃಢತೆಗೂ, ದುಡಿಮೆಗೂ ಸಿಕ್ಕುವ ಪ್ರತಿಫಲ.

–ಗ್ರೀಕ್ ಗಾದೆ

★ ಬಲಿಷ್ಠರನ್ನು ದುರ್ಬಲಗೊಳಿಸಬಹುದು; ಆದರೆ ದುರ್ಬಲರನ್ನು ಬಲಿಷ್ಠರನ್ನಾಗಿ ಮಾಡಲು ಸಾಧ್ಯವಿಲ್ಲ.

–ಲಿಂಕನ್

★ ಕಣ್ಣು ನಾಲಗೆ ಮನವು ತನ್ನದೆಂದೆನಬೇಡ, ಅನ್ಯರು ಕೊಂದರೆನಬೇಡ –ಇವು ಮೂರು ತನ್ನ ಕೊಲ್ಲುವವು ಸರ್ವಜ್ಞ.

–ಸರ್ವಜ್ಞ